ದಿನಾಂಕಃ **27.11.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಎಸ್ ರವರಿಂದಃ

ಶ್ರೀ ಕೃಷ್ಣ ಸಾಗರ್ ಹೊಟೇಲ್ ನ್ನು ಪ್ರತಿವಾದಿ ಬಾಲಕೃಷ್ಣರವರು ಪ್ರರಂಭಿಸಿದ್ದರು ಎಂದರೆ ಸರಿ. ಸದರಿ ಹೋಟಲ್ ನ್ನು ಎಷ್ಟು ವರ್ಷದಿಂದ ಪ್ರತಿವಾದಿಯು ನಡೆಸುತ್ತಿದ್ದ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದೃಢಿಕೃತ ದೂರನ್ನು ತೋರಿಸಿ ಸದರಿ ದೂರನ್ನು ಪ್ರತಿವಾದಿ ನಿಮ್ಮ ಗಂಡನ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡ ಮೆರೆಗೆ ಸದರಿ ದೂರಿನ ನಕಲು ಕಾಪಿಯನ್ನು ನಿಡಿ-**1** ಎಂದು ದೂರಿಗೆ ಸಂಬಂಧಿಸಿ ನನ್ನ ಗಂಡ ರಮೇಶ್ ರವರು ಪೊಲೀಸರಿಗೆ ನೀಡಿದ ದೂರನ್ನು ನಾನು ನೋಡಿ ಗುರುತಿಸಿದ್ದು ಅದನ್ನು ನಿಡಿ-**2** ಎಂದು ಗುರುತಿಸಲಾಯಿತು. ನಿಡಿ-**2** ರೀತಿಯ ಹೇಳಿಕೆಯನ್ನು ಪೊಲೀಸರಿಗೆ ಕೊಡುವ ದಿನಾಂಕದಂದು ದಾವಾ ಸ್ವತ್ತಿನಲ್ಲಿ ನಾನಾಗಲಿ ನನ್ನ ಗಂಡನಾಗಲಿ ಬಾಡಿಗೆದಾರನಾಗಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-**1** ದೂರಿನಲ್ಲಿ ಬಾಡಿಗೆ ಹಣವನ್ನು ಪ್ರತಿ ದಿನ ರೂ.**6000/-** ಎಂತಲೂ ಉಲ್ಲೇಖಿಸಿ ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರದಲ್ಲಿ ರೂ. **5000/-** ಎಂತಲೂ ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಪ್ರಾಥಮಿಕವಾಗಿ ವ್ಯಪಾರ ಚೆನ್ನಾಗಿ ಆಗುತ್ತಿರಲಿಲ್ಲ ಆದ್ದರಿಂದ ಬಾಡಿಗೆ ರೂ.**5000/-** ಕೊಡಲು ಒಪ್ಪಂದ ಆಗಿತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತು ಪರತಿವಾದಿಯ ಆರೋಗ್ಯ ಕೆಟ್ಟುಹೋಗಿದ್ದ ಕಾರಣ ದಾವಾ ಸ್ವತ್ತಿನ ವ್ಯಪಾರವಾನ್ನು ನಿರ್ವಹಿಸಲು ಪ್ರತಿವಾಗಿಯು ನನ್ನನ್ನು ನೇಮಕ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ನೇಮಕಾತಿಯಂತೆ ನಾನು ಪ್ರತಿ ದಿನ ಪ್ರತಿವಾದಿಗೆ ರೂ.**6000/-** ಹಣವನ್ನು ಹೊಟೇಲ್ ಲೈಸನ್ಸ್ ಫೀ ಆಗಿ ಕೊಡಬೇಕಾಗಿತ್ತು ಎಂದರೆ ಸಾಕ್ಷಿಯು ನನಗೆ ಅರ್ಥವಾಗುತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರಸ್ತುತವಾಗಿ ಶ್ರೀನಿಧಿ ಹೆಸರಿನ ಹೊಟೇಲ್ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಕೊನೆಯ ಬಾರಿಗೆ ನೀವು ಯಾವಾಗ ದಾವಾ ಸ್ವತ್ತಿನ ಹೋಟಲ್ ಬಳಿ ಹೋಗಿರುತೀರಿ ಎಂದರೆ ನನಗೆ ನೆನಪಿಲ್ಲ.

ದಾವೆ ಸಲ್ಲಿಸುವ ದಿನದಂದು ಮತ್ತು ಆ ಪೂರ್ವದಲ್ಲಿಯೇ ನನ್ನ ಮತ್ತು ದಾವಾ ಸ್ವತ್ತಿನ ಮಾಲೀಕರ ನಡುವಿನ ಬಾಡಿಗೆ ಕರಾರು ಅಂತಿಮಗೊಂಡಿತ್ತು ಮತ್ತು ಶ್ರೀ ನಿಧಿ ಹೋಟಲ್ ದಾವಾ ಸ್ವತ್ತಿನಲ್ಲಿ ಪ್ರಾರಂಭಗೊಂಡಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ಬಳಿ ಪ್ರತಿ ದಿನ ರೂ.**6000/-** ಹಣವನ್ನು ರೂ.**5000/-**ಕ್ಕೆ ಇಳಿಕೆ ಮಾಡಲು ಎಂದಿಗೂ ನಾನು ಕೇಳಿಕೊಂಡಿಲ್ಲ ಎಂದರೆ ಸರಿಯಲ್ಲ. ಹೋಟಲ್ ವ್ಯವಹಾರವನ್ನು ಆನ್ ಲೈನ್ ಫುಡ್ ಸರ್ವಿಸಗೆ ಲಿಂಕ್ ಮಾಡಿರುತ್ತೇನೆ ಎಂದು ಸಾಬೀತು ಪಡಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ಆನ್ ಲೈನ್ ಸರ್ವಿಸ್ **food supply** ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ರೂ.**11** ಲಕ್ಷ ಹಣವನ್ನು ಮುಂಗಡವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಹಣವನ್ನು ಪ್ರತಿವಾದಿಗೆ ಪಾವತಿಸಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಯಾವುದೇ ದಾಖಲೆಗಳನ್ನು ಹಾಜರು ಪಡಿಸಿದಿದ್ದರೂ ಸಹ ಸುಳ್ಳು ಸಾಕಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೋಟಲ್ ನಡೆಸಲು ತಗಲುವಂತಹ ವಿದ್ಯುತ್ ಬಿಲ್, ನೀರಿನ ಮತ್ತು **labor charges** ಪಾವತಿಸುವ ಜವಾಬ್ದರಿ ನನ್ನ ಮೇಲೆ ಇತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.